


**ISSN Print:** 2394-7500
**ISSN Online:** 2394-5869
**Impact Factor:** 8.4
IJAR 2023; 9(2): 228-231
www.allresearchjournal.com
Received: 17-12-2022
Accepted: 19-01-2023

**Dr. Narayana KH**
Lecturer in Sanskrit,
Seshadripuram Composite P U College, Bangalore,
Karnataka, India

**Corresponding Author:**
**Dr. Narayana KH**
Lecturer in Sanskrit,
Seshadripuram Composite P U College, Bangalore,
Karnataka, India

# वृक्षोऽपि जीवः

**Dr. Narayana KH**

**DOI:** https://doi.org/10.22271/allresearch.2023.v9.i2d.10615

ಪೀಠಿಕೆ

ಪ್ರಕೃತಿಯ ಸತ್ಯಾಸತ್ಯತೆಯನ್ನು ಅರಿಯದ ಮಾನವನು ಇಂದು ಪ್ರಕೃತಿಯನ್ನು ನಾಶಗೊಳಿಸುತ್ತಿರುವುದು ಸೋಜಿಗದ ಸಂಗತಿ. ಪ್ರಕೃತಿಯನ್ನು ನಾಶಪಡಿಸಿದರೆ ಪ್ರಕೃತಿದತ್ತವಾಗಿ ಪಡೆಯುವ ಎಲ್ಲಾವಸ್ತುಗಳೂ ನಶಿಸುವುದರಲ್ಲಿ ಎರಡು ಮಾತಿಲ್ಲ. ಹಾಗಿದ್ದರೆ ಪ್ರಕೃತಿ ಎಂದರೇನು? ಹಾಗೂ ಅದರಿಂದ ಪ್ರಯೋಜನವಾದರೂ ಏನು? ಎಂಬುದಾಗಿ ಅರಿಯದ ಅವಿವೇಕಿ ಮನುಜರು "मूर्खस्य नास्त्यौषधम्" ಎಂಬ ಮಾತಿಗೆ ಸ್ಪಷ್ಟ ನಿದರ್ಶನ. ಆದರೆ ವಿವೇಕಯುಕ್ತರಾದ ಮಾನವರು ಪ್ರಕೃತಿಯ ಮಹಿಮೆಯನ್ನರಿತು, ಪ್ರಕೃತಿಯನ್ನು ಬೆಳೆಸಲು ಪ್ರಯತ್ನಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ಹಾಗಾದರೆ ಪ್ರಕೃತಿದತ್ತವಾದ ವಿಷಯಗಳಾವುವು? ಎಂಬ ವಿಷಯವನ್ನರಿತು ಪ್ರಾಕೃತಿಕ ರಕ್ಷಣೆಗೋಸ್ಕರ ನಮ್ಮಲ್ಲಿ ನಾವು ಸಮಂಜಸ ನಿಲುವನ್ನು ತೆಗೆದುಕೊಳ್ಳಲು ಪ್ರಯತ್ನಿಸೋಣ.

ಪ್ರಕೃತಿ ಎಂಬ ಶಬ್ದಕ್ಕೆ ಸ್ವಭಾವ, ಸಹಜವಾದ ಗುಣ ಎಂಬ ನಾನಾರ್ಥಗಳಿದ್ದರೂ ಪ್ರಸ್ತುತ ಸಂದರ್ಭದಲ್ಲಿ ಪ್ರಕೃತಿ ಎಂಬ ಶಬಕ್ಕೆ ನಿಸರ್ಗ, ಸುತ್ತಲಿನ ಪರಿಸರ ಎಂಬರ್ಥದಲ್ಲಿ ಅವಲೋಕಿಸಿದಾಗ, ಶುದ್ಧ ಪರಿಸರಕ್ಕೆ ಮೂಲವಾದುದು ವೃಕ್ಷಾದಿಗಳು. "वृक्षोमहीरुह श्शाखी विटपी पादपस्तरुः" (अमरकोश) ಎಂಬಿತ್ಯಾದಿ ನನಾ ಹೆಸರುಗಳಿಂದ ಸೂಚಿಸಲ್ಪಡುವ ಈ ವೃಕ್ಷಮಾತೆಯ ಆವಿರ್ಭಾವವಾದರೂ ಹೇಗಾಯಿತು ? ಎಂಬುದನ್ನು ತಿಳಿಯುವುದರೊಂದಿಗೆ ಈ ವೃಕ್ಷಗಳು ನಮ್ಮಂತೆಯೇ ಜೀವವನ್ನು ಹೊಂದಿರುವುದೇ? ಸ್ಥೂಲ ಸೂಕ್ಷ್ಮಾದಿ ಶಾರೀರಿಕ ವಿಚಾರಗಳಾದರೂ ಏನು? ವೃಕ್ಷಗಳ ಮೂಲಗಳು ಯಾವುವು? ಮನುಷ್ಯನಂತೆಯೇ ಬಾಲ್ಯ, ಯೌವ್ವನ, ಮುಪ್ಪು ಎಂಬ ವಯೋಮಿತಿಗಳ ಪಮಾಣವಿದೆಯೇ? ಮುಂತಾದ ವಿಷಯಗಳ ಕುರಿತು ಅವಲೋಕಿಸೋಣ.

ಸೃಷ್ಟಿಯ ಆದಿಯಲ್ಲಿ ಹಗಲು ಕತ್ತಲಲ್ಲದ, ವಿವರಣಾತ್ಮಕವಾಗಿ ವಿವರಿಸಲು ಅಸಾಧ್ಯವಾದ, ಸುಪ್ತವೂ ಜಾಗೃತವೂ ಅಲ್ಲದ ಒಂದು ಅವ್ಯಕ್ತಾವಸ್ಥೆಯ ಬ್ರಹ್ಮವಿತ್ತು. ತದನಂತರ ಆ ಅವ್ಯಕ್ತಾವಸ್ಥೆಯ ಬಹ್ಮವೇ ವ್ಯಕ್ತರೂಪವನ್ನು ತಾಳಿ ಪಂಚಭೂತಗಳು ಹಾಗೂ ಅಹೋರಾತ್ರಿಗಳು ಗೋಚರವಾಯಿತು ಎಂದು ಮನುಸ್ಮೃತಿಯಲ್ಲಿ ಮನುವು ವ್ಯಕ್ತಪಡಿಸುತ್ತಾನೆ. ಹೊಡೆದಾಗ ಆದ ನೋವು ಮನೋನುಭವಕ್ಕೆ ಹೇಗೆ ಗ್ರಾಹ್ಯವೋ ಹಾಗೆ ಮನೋ ಮಾತ್ರ ಗ್ರಾಹ್ಯನಾದ ಯಮನಿಯಮಾದಿ ಯೋಗಬಲವುಳ್ಳ ಬ್ರಹ್ಮನು ನಿರವಯವ ರೂಪವನ್ನು ಬಿಟ್ಟು ಸಾವಯವರೂಪವನ್ನು ತಾಳಿ ತನ್ನ ಇಚ್ಛೆಯಿಂದಲೇ

ಆರಂಭದಲ್ಲಿ ಮಹಾಜಲವನ್ನು ಸೃಷ್ಟಿಸಿದನು. ಆ ಬ್ರಹ್ಮನೇ ನಾರಯಣನೆಂದು ಪರಿಕಲ್ಪಿತನಾದನೆಂದು –

आपोनरा इति प्रोक्ता आपोवै नरसूनवः ।
ता यदस्यायनं पूर्वं तेन नारायणस्मृतः ॥

ಎಂಬ ಶ್ಲೋಕವು ಪುಷ್ಟೀಕರಿಸುತ್ತ, 'ನಾರಾ' ಎಂದರೆ ನೀರು, 'ಅಯನ' ಎಂದರೆ ಆಶ್ರಯ, ಆ ಬ್ರಹ್ಮನೇ ಜಲಾಶ್ರಯನು ಆದ್ದರಿಂದಲೇ ನಾರಾಯಣ ಎಂಬ ಶಬ್ದವು ಬ್ರಹ್ಮವಾಚಕವೆಂದು ತಿಳಿಸುತ್ತದೆ. ಹೀಗೆ ನಾರಯಣವಾಚಿ ಬ್ರಹ್ಮನು ಆ ನೀರಿನಲ್ಲಿ ಒಂದು ಅಂಡವನ್ನು ಹಾಕಿ ಆ ಅಂಡದಲ್ಲಿ ತಾನೇ ಸ್ವತಃ ಬಹಳಷ್ಟು ವರ್ಷಗಳ ಕಾಲ ಜಲಾಶ್ರಿತನಾಗಿದ್ದು ತನ್ನ ಧ್ಯಾನಬಲದಿಂದ ಆ ಅಂಡವನ್ನು ಎರಡು ಹೋಳಾಗಿಸಿ ಅದರಿಂದಲೇ ಸ್ವರ್ಗ, ಭೂಮಿ, ಆಕಾಶ, ದಿಕ್, ಸಮುದ್ರ ಹೀಗೆ ಸ್ಥಾವರ ಜಂಗಮಾತ್ಮಕವಾದ ವಸ್ತುಗಳ ಉತ್ಪತ್ತಿಯಾಯಿತೆಂದು ಮನುವು ಹೇಳುವಂತೆ, "आदि सर्गे हि वृक्षं विनैव बीजमुत्पद्यते हिरण्यगर्भसंकल्पेन तच्छरीरादिभ्य इति शृति-स्मृत्योः प्रसिद्धम् ।" ಎಂಬುದಾಗಿ ಸಾಂಖ್ಯ ಪ್ರವಚನ ಭಾಷ್ಯದಲ್ಲಿ ತಿಳಿಸಲ್ಪಟ್ಟಿದೆ. ಇದನ್ನು ಅರ್ಥೈಸಿದಾಗ ಸೃಷ್ಟಿಯ ಆದಿಯಲ್ಲಿ ಬ್ರಹ್ಮನು ವೃಕ್ಷಗಳು ಇಲ್ಲದೆಯೇ ಬೀಜಗಳನ್ನು ಸೃಷ್ಟಿಸಿದನು, ಈ ಬೀಜಗಳಿಂದಲೇ ವೃಕ್ಷಗಳು ಹುಟ್ಟಿದವು ಎಂಬ ಮಾತು ಸ್ಪಷ್ಟೀಕರಿಸುತ್ತದೆ. ಮನುಸ್ಮೃತಿಯನ್ನು ಅವಲೋಕಿಸಿದಾಗ ಅಲ್ಲಿ ಬರುವ –

शरीरजैः कर्मदोषैर्याति स्थावरतां नरः ।
वाचिकैः पक्षिमृगतां मानसैरंत्यजातिताम् ॥

ಈ ಶ್ಲೋಕವು ಸೂಕ್ಷ್ಮ ಶರೀರಜಾತರಾದ ಜೀವರುಗಳು ತಮ್ಮ ಪಾಪಕರ್ಮಗಳ ಪರಿಣಾಮವಾಗಿ ವೃಕ್ಷಾದಿ ಜನ್ಮವನ್ನು ಪಡೆಯುತ್ತಾರೆ. ಎಂದು ತಿಳಿಸುತ್ತದೆ. ಇದೇ ರೀತಿಯಾಗಿ ಚರಕ, ಸುಶ್ರುತ, ವಾಗ್ಭಟರ ಆಯುರ್ವೇದಾದಿ ಗ್ರಂಥಗಳು ಪುಷ್ಟೀಕರಿಸಿದರೂ ಸಹ ಕಣ್ಣಿಗೆ ಕಾಣದ ಯಾವುದೋ ಅನಿರ್ವಚನೀಯವಾದ ಶಕ್ತಿಯಿಂದ ವೃಕ್ಷಾದಿಗಳ ಜನ್ಮವಾಯಿತೆಂಬುದು ಸತ್ಯ.

ಹೀಗೆ ಜನ್ಮವೆತ್ತ ವೃಕ್ಷಾದಿಗಳು ಸಜೀವವೋ ನಿರ್ಜೀವವೋ ಎಂದು ತಿಳಿಯ ಹೊರಟರೆ, ವೃಕ್ಷಗಳಾಗಲಿ ಅಥವಾ ಲತೆಗಳಾಗಲಿ ಜೀವವನ್ನು ಹೊಂದಿರುವ ಸಜೀವಿಗಳಾಗಿವೆ. ಮಹಾಭಾರತದ ಶಾಂತಿಪರ್ವದಲ್ಲಿ ಭೀಷ್ಮನು ಯುಧಿಷ್ಠಿರನಿಗೆ ಜಗತ್ತಿನ ಉತ್ಪತ್ತಿ ಮತ್ತು ವಿಭಿನ್ನ ತತ್ವಗಳ ಕುರಿತಾಗಿ ತಿಳಿಸುವಾಗ ಭೃಗು-ಭಾರದ್ವಾಜರು ನಡೆಸಿದ ಸಂವಾದವನ್ನು ಅರುಹುತ್ತಾನೆ. ಭಾರದ್ವಾಜರು ಭೃಗು ಮಹರ್ಷಿಗಳಲ್ಲಿ ಸ್ಥಾವರಾತ್ಮಕವಾದ ವೃಕ್ಷಾದಿಗಳಲ್ಲಿ ಪೃಥ್ವಿ, ಅಪ್, ತೇಜ, ವಾಯು, ಆಕಾಶಾದಿ ಪಂಚಭೂತಗಳು ಹಾಗೂ ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿ ಪಂಚಭೂತಾತ್ಮಕವಾದ ವಸ್ತುಗಳು ಇರಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದಾಗ, ಭೃಗು ಮಹರ್ಷಿಗಳು–

घनानमपि वृक्षाणामाकाशोऽस्ति न संशयः ।
तेषां पुष्प फलव्यक्तिर्नित्यं समुपपद्यते ॥

ಘನರೂಪದಲ್ಲಿರುವ ವೃಕ್ಷಗಳು ಅನುದಿನವೂ ಹೂವು, ಹಣ್ಣು, ಕಾಯಿಯಿಂದ ಅಭಿವ್ಯಕ್ತವಾಗುತ್ತಿರುವುದರಿಂದ ಅವುಗಳಲ್ಲಿ ಆಕಾಶತತ್ವವಿದೆ ಎಂಬುದನ್ನು ಸ್ಪಷ್ಟವಾಗಿಸಿ, ಇದು ವಾಯುವಿನ ಸಂಬಂಧವಾದ ಚೇಷ್ಟೆ ಎನ್ನುತ್ತಾನೆ. ಅದರಂತೆ,

ऊष्मतो म्लायते पर्णं त्वक्फलं पुष्पमेवच ।
म्लयते शीर्यते चापि स्पर्शस्तेनात्र विद्यते ॥

ವೃಕ್ಷಗಳನ್ನು ಸ್ಪರ್ಶಿಸಿದ ಮಾತ್ರಕ್ಕೆ ಅದರಲ್ಲಿ ಅಗ್ನಿತತ್ವವಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ, ವೃಕ್ಷದ ತೊಗಟೆಗಳು ಬಿರುಕು ಬಿಡುವುದನ್ನು, ಎಲೆಗಳು ಒಣಗುವುದನ್ನು, ಫಲ ಪುಷ್ಪಗಳು ಬಾಡುವುದನ್ನು ನಾವು ಕಾಣುತ್ತೇವೆ. ಇದಕ್ಕೆ ಕಾರಣ ವೃಕ್ಷಾದಿಗಳಲ್ಲಿರುವ ಉಷ್ಣಾಂಶಗಳೇ ಆಗಿವೆ ಎಂಬುದನ್ನು ತಿಳಿಸಿಕೊಡುತ್ತ,

वाय्वग्न्यशनिनिर्घोषः फलं पुष्पं विशीर्यते ।
श्रोत्रेणगृह्यते शब्दः तस्माच्छृण्वन्ति पादपाः ॥

ಮನುಷ್ಯನು ಯಾರಾದರೂ ಗದರಿದರೆ ಶಬ್ದಜ್ಞಾನದಿಂದ ಹೇಗೆ ಬೆಚ್ಚಿಬೀಳುತ್ತನೋ ಹಾಗೆ ವಾಯು, ಅಗ್ನಿ ಮತ್ತು ಸಿಡಿಲುಗಲ ಘರ್ಜನೆ ಕೇಳಿಸುತ್ತಿದ್ದಂತೆ ವೃಕ್ಷಗಳಲ್ಲಿರುವ ಫಲ ಪುಷ್ಪಗಳು ಶೀರ್ಣವಾಗಿ ಕೆಳಕ್ಕೆ ಉದುರುತ್ತವೆ. ಶ್ರವಣ ಸಾಮರ್ಥ್ಯವಿಲ್ಲದಿದ್ದರೆ ಅದು ಸಾಧ್ಯವಾಗುತಿರಲಿಲ್ಲ. ಆದ್ದರಿಂದ ವೃಕ್ಷಾದಿಗಳಲ್ಲಿ ಶಬ್ದತತ್ವವಿರುವುದು ಸ್ಪಷ್ಟ.

पुण्यापुण्यैस्तथागन्धैः धूपैश्च विविधैरपि ।
अरोगः पुष्टितास्सन्ति तस्माज्जिघ्रन्ति पादपाः ॥

ಪವಿತ್ರಾಪವಿತ್ರವಾದ ಗಂಧಗಳಿಂದ ಹಾಗೂ ವಿವಿಧವಾದ ಧೂಪಗಳಿಂದ ಆರೋಗಯುತವಾಗಿ ಬೆಳೆಯುವ ಗಿಡಮರಗಳು ಪುಷ್ಟವಾಗಿ ಫಲಪುಷ್ಪಗಳಿಂದ ಸಮೃದ್ಧವಾಗುತ್ತವೆಯಾದ್ದರಿಂದ ಅವುಗಳಲ್ಲಿ ಗಂಧತ್ವವಿದೆಯೆಂಬುದನ್ನು ಕಾಣುತ್ತೇವೆ.

ಹೀಗೆ ಪಾದಪಾದಿಗಳಲ್ಲಿ ಪಂಚಭೂತಗಳಿರುವಂತೆ ಪಂಚದ್ರುವ್ಯಗಳೂ ಅಢಕವಾಗಿದೆ. ಯಾಕೆಂದರೆ 'ಸೂರ್ಯಭಕ್ತಾ' ಎಂಬ ಗಿಡ ಸೂರ್ಯನು ಆಕಾಶದಲ್ಲಿ ಹೇಗೆ ಸಂಚರಿಸುತ್ತಾನೋ ಹಾಗೆ ತಾನೂ ಕೂಡ ತಿರುಗುವುದರಿಂದ ಅವುಗಳಲ್ಲಿ ನೇತ್ರವಿರುವುದು ತಿಳಿಯುತ್ತದೆ. ಮೇಘದ ಘರ್ಜನೆ ಕೇಳಿದ ಮಾತ್ರಕ್ಕೆ ಲವಲೀ ಮುಂತಾದ ಕೆಲವು ಗಿಡಗಳು ಹಣ್ಣುಗಳನ್ನು ಬಿಟ್ಟರೆ ಇನ್ನು ಕೆಲವು ವೃಕ್ಷಗಳಿಂದ ಫಲ ಪುಷ್ಪಗಳು ಉದುರಿ ಬೀಳುತ್ತವೆ ಇದರಿಂದ ಶಬ್ದಜ್ಞಾನವಿರುವುದು ಕಂಡುಬರುತ್ತದೆ. ಮಾದಳಗಿಡ ನರಿಯ ಮಾಂಸರಸದ ಗಂಧದಿಂದ ಹೆಚ್ಚು ಹೆಚ್ಚು ಹಣ್ಣನ್ನು ಬಿಡುತ್ತವೆಯಾದ್ದರಿಂದ ಅವುಗಳಿಗೂ ನಾಸಿಕವಿದೆಯೆಂದು ಊಹಿಸಬಹುದು. ರುಚಿಯ ಜ್ಞಾನವಿರುವುದರಿಂದಲೇ ಮೀನಿನ ಮಾಂಸರಸವನ್ನು ಮಾವಿನ ಮರದ ಬೇರುಗಳಿಗೆ ಹೊಯ್ಯುವುದರಿಂದ ಅವು ಹೆಚ್ಚು ಫಲವನ್ನು ನೀಡುತ್ತವೆ. ಅಶೋಕ ವೃಕ್ಷ ಸ್ತ್ರೀಪಾದಸ್ಪರ್ಶದಿಂದ ಬೇಗ ಪುಷ್ಪಿತಗೊಳ್ಳುತ್ತದೆ ಹಾಗಾಗಿ ಅದರಲ್ಲಿ ಸ್ಪರ್ಶಜ್ಞಾನವಿರುವುದೆಂಬುದು ವೇದ್ಯವಾಗಿದೆ. ಈ ರೀತಿಯಾಗಿ ಶಬ್ದ ಸ್ಪರ್ಶಾದಿ ಪಂಚದ್ರುವ್ಯಗಳೂ ಕೂಡ ವೃಕ್ಷಾದಿಗಳಲ್ಲಿ ಅಢಕವಾಗಿರುವುದರಿಂದ ವೃಕ್ಷಾದಿಗಳು ಸಜೀವವೆಂಬುದು ವೇದ್ಯ.

ವೃಕ್ಷಾದಿಗಳಿಗೆ ಮೂಲ ಬೇರು. ಮನುಷ್ಯಾದಿ ಜೀವಿಗಳು ಯಾವರೀತಿಯಾಗಿ ಬಾಯಿಯ ಮೂಲಕವಾಗಿ ರಸಸ್ವಾದನೆಯನ್ನು ಮಾಡುತ್ತವೋ ಹಾಗೆ ವೃಕ್ಷಾದಿಗಳು ಪಾದದಿಂದ ಅಂದರೆ ಬೇರಿನಿಂದ ರಸಾಸ್ವಾದನೆಯನ್ನು ಮಾಡುತ್ತವೆ. "मूलं बुध्नोऽघ्रि नामकः" ಎಂಬ ಅಮರಕೋಶದ ನುಡಿಯು ಬೇರುಗಳಿಗೆ ಮೂಲ, ಪಾದ, ಬುಧ್ನ ಇತ್ಯಾದಿ ಹೆಸರುಗಳಿವೆ ಎಂದು ತಿಳಿಸುತ್ತದೆ. "पादपाः पादैः पिबति" ಎಂಬುದು ಅಮರಕೋಶದ ಟೀಕೆ. ವೃಕ್ಷಗಳು ಪಾದ(ಬೇರು)ದಿಂದ ನೀರು ಕುಡಿಯುತ್ತದೆ. ಆದ್ದರಿಂದಲೇ ವೃಕ್ಷಾದಿಗಳನ್ನು ಪಾದಪಗಳು ಎಂದು ಕರೆಯುತ್ತಾರೆ. ಹೀಗೆ ಪಾದಪಗಳು ಹಸಿವಾದಾಗ ಆಹಾರ ಪಾನೀಯಗಳನ್ನು ಮಣ್ಣು ಮತ್ತು ನೀರಿನ ರೂಪದಲ್ಲಿ ಬೇರುಗಳ ಮೂಲಕ ಸ್ವೀಕರಿಸುವುದರೊಂದಿಗೆ ಫಲ, ಪುಷ್ಪಾದಿ ಎಲ್ಲಾ ಅವಯವಗಳ ಉತ್ಪತ್ತಿಗೆ ಬೇರೇ ಮೂಲವಾಗಿದೆ.

ಮನುಷ್ಯಾದಿ ಜೀವಿಗಳಿಗೆ ಬಾಲ್ಯ, ಯೌವ್ವನ, ಮುಪ್ಪು ಎಂಬ ಅವಸ್ಥಾತ್ರಯಗಳಿದ್ದಂತೆ ವೃಕ್ಷಾದಿಗಳಿಗೂ ಬಲ್ಯ ಯೌವ್ವನ ಮುಪ್ಪು ಎಂಬ ಅವಸ್ಥಾತ್ರಯಗಳಿವೆ. "फलं वृक्षस्य यौव्वनम्" ಎಂಬ ಚಾಣಕ್ಯ ನೀತಿಶಾಸ್ತ್ರಕಾರರ ವಚನದಂತೆ ಯಾವಾಗ ವೃಕ್ಷವು ಫಲವನ್ನು ನೀಡಲು ಪ್ರಾರಂಭಿಸುತ್ತದೋ ಆಗ ಅದು ವೃಕ್ಷದ ಯೌವ್ವನಾವಸ್ಥೆಯಾಗಿದೆ. ಫಲ ಬಿಡುವ ಮುಂಚಿತವಾದ ಅವಸ್ಥೆಯನ್ನು ಬಾಲ್ಯಾವಸ್ಥೆಯೆಂದೂ, ಯಾವಾಗ ವೃಕ್ಷವು ಬಿರುಕು ಬಿಡುವುದು, ತೊಗಟೆ ಉದುರುವಿಕೆ ಮೊದಲಾದವುಗಳು ಸಂಭವಿಸುವುದೋ ಆಗ ಅದು ವಾರ್ಧಕ್ಯಾವಸ್ಥೆಯನ್ನು ಹೊಂದಿತೆಂದು ತಿಳಿಯಬಹುದಾಗಿದೆ.

ಹೆಚ್ಚಾಗಿ ಈ ಕಲಿಯುಗದಲ್ಲಿ ಮನುಜನ ಆಯಸ್ಸಿನ ಪ್ರಮಾಣ 120 ವರ್ಷಗಳಿರಬಹುದು. ಆದರೆ ವೃಕ್ಷಾದಿಗಳ ಆಯು ಪ್ರಮಾಣ "शतानि त्रीणि वर्षाणां सारद्रुम वयः स्मृतम्" ಎಂಬಂತೆ 300 ವರ್ಷಗಳಷ್ಟಾಗಿವೆ. ಒಂದು ವೃಕ್ಷ ಉತ್ಪತ್ತಿ ಆದಾಗಿನಿಂದ 1 ರಿಂದ 16 ವರ್ಷಗಳನ್ನು ಬಾಲ್ಯಾವಸ್ಥೆಯೆಂದೂ, 16 ರಿಂದ 150 ವರ್ಷಗಳನ್ನು ಯೌವ್ವನಾವಸ್ಥೆಯೆಂದೂ ಹಾಗೂ 150 ರಿಂದ 300 ವರ್ಷಗಳ ಅವಧಿಯನ್ನು ವಾರ್ಧಕ್ಯಾವಸ್ಥೆ ಎಂದೂ ಹೇಳುತ್ತಾರೆ. ಹೀಗೆ ವೃಕ್ಷದ ಬಾಲ್ಯಾದಿ ಅವಸ್ಥೆಗಳನ್ನು ಮತ್ತು ವಯಸ್ಸಿನ ಪ್ರಮಾಣವನ್ನು ನಿರ್ಧರಿಸಲಾಗಿದೆ.

ಹೀಗೆ ವೃಕ್ಷಗಳ ಕುರಿತು ಇನ್ನೂ ಅನೇಕ ವಿಷಯಗಳಿದ್ದು ಪ್ರಬಂಧಕ್ಕೆ ಅನುಕೂಲವಾಗುವಂತೆ ಕೇವಲ ವೃಕ್ಷವು ಸಜೀವವೋ ಅಥವಾ ನಿರ್ಜೀವವೋ ಎಂಬ ವಿಷಯವನ್ನಷ್ಟೇ ಆಯ್ದುಕೊಂಡಿದ್ದು, ವೃಕ್ಷವು ಸಜೀವವಾಗಿದ್ದು ಈ ಹಿಂದೆ ನಮ್ಮ ಪೂರ್ವಜರು ಪಂಚಭೂತಗಳಿಂದ ಸೃಷ್ಟಿಯಾದ ಪ್ರತಿಯೊಂದು ವಸ್ತುವಿನಲ್ಲೂ ದೈವತ್ವವನ್ನು ಕಣುತ್ತಿದ್ದರು. ಆದರೆ ಇಂದು ಮನುಜ ತನ್ನ ಸ್ವಾರ್ಥದ ಉತ್ಕಟೇಚ್ಛೆಯಿಂದ ವೃಕ್ಷಾದಿಗಳನ್ನು ಕಡಿದು ಪ್ರಕೃತಿ ನಾಶವಾಗುವಂತೆ ಮಾಡುತ್ತಿರುವುದು ಬೇಸರದ ವಿಷಯವಾಗಿದೆ.

ನಮ್ಮ ಹಿರಿಯರು "पञ्चाम्ररोपी नरकं न याति" ಎಂಬುದಾಗಿ ಜನರಿಗೆ ಮನವರಿಕೆ ಮಾಡಿ ಪ್ರಕೃತಿಯನ್ನು ಸಂರಕ್ಷಿಸುತ್ತಿದ್ದರು, ಅಷ್ಟೇ ಅಲ್ಲದೇ, ವೃಕ್ಷವನ್ನು ನಾಶಮಾಡಿದರೆ ನರಕಪ್ರಾಪ್ತಿಯಾಗುತ್ತದೆ ಎಂಬ ಭಾವನೆಯನ್ನು ಮೂಡಿಸುತ್ತಿದ್ದರು. ಪರಿಸರದ ರಕ್ಷಣೆಗೋಸ್ಕರ

ಶಾಸನವನ್ನೂ ನಿರ್ಮಿಸಿದ್ದರು. ಆದರೆ ಇಂದಿನ ಪರಿಸ್ಥಿತಿಯನ್ನು ಅವಗಾಹಿಸಿದಾಗ ಪ್ರಕೃತಿ ಸಂರಕ್ಷಣೆಯ ದುಃಸ್ಥಿತಿ ಎಷ್ಟರಮಟ್ಟಿಗೆ ಹೆಚ್ಚಿದೆ ಎಂಬುದು ನಮಗೆ ಮನವರಿಕೆಯಾಗುತ್ತದೆ. ಆದ್ದರಿಂದ ನಮ್ಮನ್ನು ನಾವು ಯಾವರೀತಿ ರಕ್ಷಿಸಿಕೊಳ್ಳುತ್ತೇವೋ ಹಾಗೆಯೇ ನಮ್ಮ ಪ್ರಕೃತಿ ದತ್ತವಾದ ಗಿಡ ಮರಗಳನ್ನು ಪಾಲಿಸಿ ಪೋಷಿಸಿ ಬೆಳೆಸೋಣ ಮತ್ತು ನಮ್ಮ ಜೀವವನ್ನು ಹಸನಾಗಿಸುವುದರೊಂದಿಗೆ **"सर्वे पदपाः सुखिनो भवन्तु"** ಎಂದು ಹಾರೈಸುತ್ತ ವೃಕ್ಷಮಾತೆಯ ಉಳಿವಿಗೆ ಕಾರಣರಾಗೋಣ.

ಆಧಾರ ಗ್ರಂಥಗಳು


1. ಶ್ರೀಮನ್ಮಹಾಭಾರತ - ದಿ || ವಿದ್ವಾನ್ ಹೆಚ್. ಎನ್. ರಂಗಸ್ವಾಮೀ
2. ಅಮರಕೋಶ - ಪಂ. ವಿಶ್ವನಾಥ. ಝಾ
3. ಸಂಪೂರ್ಣ ಭಾಗವತ - ಕೆ. ಅನಂತರಾಮ ರಾವ್
4. ಶ್ರೀಮದ್ಭಗವದ್ಗೀತಾ - ಕೀರ್ತನಚರ್ಯ ಲಕ್ಷ್ಮಣದಾಸ ವೇಲನಕರ್
5. ಮನುಸ್ಮೃತಿ - ಶ್ರೀ. ಈಶ್ವರ ಶಾಸ್ತ್ರಿ
6. ವೃಕ್ಷಾಯುರ್ವೇದಃ - ಡಾ || ಎಮ್. ಎಸ್. ನಾಗೇಶ್ ರಾವ್
7. ಶಬ್ದಾರ್ಥ ಕೌಸ್ತುಭ - ಚಕ್ರವರ್ತಿ ಶ್ರಿನಿವಾಸ ಗೋಪಾಲಾಚಾರ್ಯ